SRI BASAVARAJ MAGAVI :—As you are aware the irrigation works can be undertaken wherever they are feasible. Unless there is feasibility of taking up irrigation works, it is not possible to take either major or minor irrigation works. So far as other works are concerned it is not true to say that certain taluks have been benefited and certain other taluks have been neglected. It is not correct to say that Chincholi alone has taken the major portion of the amount spent.

ಶ್ರೀ ಎಂ. ನಾಗಪ್ಪ :—ಸ್ವಾಮಿ ಕೊಟ್ಟ ಅಂಕಿ ಅಂಶಗಳನ್ನು ದಯವಿಟ್ಟು ಇನ್ನೊಂದು ಸಾರಿ ಪರಿಶೀಲನೆ ಮಾಡಿ ನೋಡಿ. ಗುಲಬರ್ಗ ಜಿಲ್ಲೆಯ ಈ ಮೂರು ತಾಲ್ಲೂಕುಗಳಲ್ಲಿ ಅಂದರೆ ಆಲಂದ್, ಸೇಡಂ ಮತ್ತು ಅಫಜಲಪುರ ತಾಲ್ಲೂಕುಗಳಲ್ಲಿ ರೋಡ್ಸಿಗೆ ಬಿಲ್ಡಿಂಗ್ಸ ಮತ್ತು ಇನ್ನಿತರ ಕಾರ್ಯಕ್ರಮಗಳಿಗೆ ಮಿನಿಮಂ ಅಮೌಂಟ್ ಖರ್ಚಾಗಿದ್ದು ಬೇರೆ ತಾಲ್ಲೂಕುಗಳಲ್ಲಿ ಮಾಗ್ನಿಮಂ ಅಮೌಂಟ್ ಖರ್ಚುವಾಡಿದ್ದೀರಿ ಕಾಂಗ್ರೇಸಿನಿಂದ ಅರಿಸಿಬಂದ ತಾಲ್ಲೂಕಿನಲ್ಲಿ ಜಾಸ್ತಿ ಕೆಲಸ ಮಾಡಿದ್ದೀರಿ ಎನ್ನುವ ಅಂಕಿ ಅಂಶಗಳನ್ನು ಒಪ್ಪಿ ಕೊಳ್ಳುತ್ತೀರಾ ? ಅಲಂದ ಅಫಜಲಪುರ ಸೇಡಂಗೆ ಕಮ್ಮಿ ದುಡ್ಡು ಒದಗಿಸಿಕೊಡುವುದಕ್ಕೆ ಕಾರಣ ಏನು?

ಶ್ರೀ ಬಸವರಾಜ ಮಾಗಾವಿ :—ನನ್ನ ಹತ್ತಿರ ಮೂರು ವರ್ಷಗಳ ಅಂಕಿ ಸಂಖ್ಯೆ ಇದೆ. ಗುಲಬರ್ಗದಲ್ಲಿ ಕೆಲವು ವರ್ಷಗಳಲ್ಲಿ ಕೆಲವು ಕಡೆ ಹೆಚ್ಚಿಗೆ ಖರ್ಚಾಗಿದೆ. ಸೇಡಂ ಜಿಲ್ಲೆಯಲ್ಲಿ ನೋಡಿದರೆ ೧೯೬೮-೬೯ ರಲ್ಲಿ ಮಾಗ್ನಿಮಂ ಖರ್ಚುಮಾಡಿದ್ದಾರೆ. ಆದುದರಿಂದ ಮಾನ್ಯ ಸದಸ್ಯರು ಹೇಳುವ ಒಂದು ವಿಚಾರದಲ್ಲಿ ಯಾವ ಅರ್ಥವೂ ಇಲ್ಲ ಎಂದು ಹೇಳಲು ಇಷ್ಟಪಡುತ್ತೇನೆ.

SRI D. KALMANKAR : Has it come to the notice of the Government that Salegaum and K. rali Tanks were not taken up for execution thought the M. L. A. of that area was repeatedly urging the Government to take up these works ? May I know the reason why they have not been taken up ?

SRI BASAVARAJ MAGAVI : Because of paucity of funds, these were not taken up. But the Government is keen on taking and implementing these works.

X-RAY BOOKLET ON THE AGRICULTURAL UNIVERSITY

318 SRI MAHADEV BANAKAR (Byadgi) :-

Will the Minister for Agriculture be pleased to state :—

(a) Whether the booklet 'X-Ray, on the Agricultural University Written by me has come to the notice of Goverument.

(b) if so, the action taken by them against the Officers concerned

(c) the opinion of the Government about the matters contained in the booklet ?

Sri B. RACHAIAH (Minister for Agriculture) :—

(*a*) Yes.

(SRI B RACHAIAH)

(*b*) The Registrar of Agricultural University has been asked to examine the matters published in this booklet and to submit the report to Government, the Report has not yet been received.

(*c*) Does not arise in view of reply to Clause (*d*) above.

ರಿಪೋರ್ಟ್ ಬಂದಿದೆ ರಿಪೋರ್ಟ್ ಪ್ರಕಾರ ಕೃಷಿ ವಿಶ್ವವಿದ್ಯಾನಿಲಯದವರ ದನದ ಕೃಷಿ ವಿಶ್ವವಿದ್ಯಾನಿಲಯದ ಕಾನೂನು ಮತ್ತು ಸ್ವಾಚ್ಯೂಟಿನಲ್ಲಿ ಏನು ಕಾನೂನು ಇದೆ ಅದರಂತೆ ನೇಮಕ ಆಗಿವೆ ಎಂದು ವರದಿಕೊಟ್ಟಿದ್ದಾರೆ.

ಶ್ರೀ ಮಹದೇವ ಜಿ. ಬಣಕಾರ್ :— ಮಾನ್ಯ ಮಂತ್ರಿಗಳು ಹೇಳಿದ ರಿಪ್ಲೈ ನನಗೆ ಅರ್ಥವಾಗಲಿಲ್ಲ.

ಶ್ರೀ ಬಿ. ರಾಚಯ್ಯ :— ಈ ಉತ್ತರದಲ್ಲಿ ಎಕ್ಸ್ ರೇ ಫಾಮಪ್ಲೆಟ್ಸ್ ಶ್ರೀಮಾನ್ ಬಣಕರ ಬರೆದಿದ್ದ ದ್ದನ್ನು ಕೃಷಿ ವಿಶ್ವವಿದ್ಯಾನಿಲಯದ ಅಧಿಕಾರಿಗಳಿಗೆ ಕಳುಹಿಸಿಕೊಟ್ಟು ಅದರಲ್ಲಿ ಎಷ್ಟು ಸತ್ಯಾಂಶ ಇದೆ ಎನ್ನುವ ಬಗ್ಗೆ ಅವರ ಅಭಿಪ್ರಾಯ ಕೇಳಿದ್ದೇವೆ. ಅಧಿಕಾರಿಗಳನ್ನು ನೇಮಕ ಮಾಡುವುದರಲ್ಲಿ ಪ್ರೊಫೆಸರುಗಳು ಅಸೋಸಿಯೇಟೆಡ್ ಪ್ರೊಫೆಸರುಗಳನ್ನು ನೇಮಕಮಾಡುವುದರಲ್ಲಿ ಕೃಷಿ ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ಕಾಯಿದೆ ಮತ್ತು ರೂಲ್ಸ್‌ಅನುಸರಿಸಿದ್ದಾರೆ ಎಲ್ಲಿಯೂ ಡಿವಿಯೇಟ್ ಮಾಡಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ.

ಶ್ರೀ ಮಹದೇವ ಜಿ. ಬಣಕಾರ್ :— ಹೇಳಿರತಕ್ಕ ಉತ್ತರದಲ್ಲಿ ಸತ್ಯಾಂಶ ಇಲ್ಲ, ಎನ್ನುವುದನ್ನು ಸ್ಥಿರಮಾಡಿಕೊಟ್ಟರೆ ತಕ್ಷಣವೇ ವೈಸ್‌ಚಾನ್ಸಲರಾಗಲೀ ತಮ್ಮ ಸ್ಥಾನಮಾನಗಳಿಗೆ ರಾಜೀನಾಮೆ ಕೊಡುತ್ತೀರಾ ?

ಶ್ರೀ ಬಿ. ರಾಚಯ್ಯ :— ಕಾಯಿದೆಗೆ ವಿರುದ್ಧವಾಗಿ ಮಾಡಲಿಲ್ಲ. ಕಾಯಿದೆಯ ಒಳಗೆ ಏನು ಸಾಧ್ಯವೋ ಅದನ್ನು ಮಾಡಿದ್ದಾರೆ ಎಂದು ಹೇಳಿದೆ.

ಶ್ರೀ ಭಾಸ್ಕರ ಶೆಟ್ಟಿ :— ಎಕ್ಸ್ ರೇ ಎನ್ನುವುದನ್ನು ಬಣಕರ ಯಾವಾಗ ತೆಗೆದರು ?

ಶ್ರೀ ಬಿ. ರಾಚಯ್ಯ :— ಬಣಕರ ಎಕ್ಸ್ ರೇ ಎಂದು ಬುಕ್‌ಲೇಟ್ ಮಾಡಿ ಕಳುಹಿಸಿ ಕೊಟ್ಟರು.

ಶ್ರೀ ಜೆ. ಆರ್. ಹಾಲಸ್ವಾಮಿ :— ಶ್ರೀ ಮಾನ್ ಬಣಕಾರರವರು ನಮಗೆ ತಿಳಿದ ಹಾಗೆ ಬೇಕಾ ದಷ್ಟು ಇರೆಗ್ಯುಲಾರಿಟೀಸ್ ತೋರಿಸಿಕೊಟ್ಟಿದ್ದಾರೆ. ಏನು ಇಲ್ಲ ಎಂದು ರಿಪೋರ್ಟ್ ಬಂದಿದೆ. ಕೆಲವು ಪೋಸ್ಟ್‌ಗಳಿಗೆ ಪಿ. ಹೆಚ್. ಡಿ. ಕ್ವಾನ್‌ಡಿಡೇಟ್ಸ್ ಇದ್ದರೂ ಕೇವಲ ಬಿ. ಎಸ್. ಸಿ. ಕ್ವಾನ್‌ಡಿಡೇಟ್ಸನ ತೆಗೆದುಕೊಂಡಿದ್ದಾರೆ. ಈ ಇರೆಗ್ಯುಲಾರಿಟೀಸ್ ಸರಿಪಡಿರುವುದಕ್ಕೆ ಒಂದು ಎನಕ್ವೈರಿ ಏರ್ಪಾಡು ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ :— ಯಾವ ಯಾವ ಹುದ್ದೆಗೆ ಏನೇನು ಕ್ವಾಲಿಫಿಕೇಷನ್ಸ್ ಬೇಕು ಅನುಭವಗಳ ಬೇಕು ಅವುಗಳನ್ನೆಲ್ಲಾ ಅಡವರ್ಟೈಜು ಮಾಡತಕ್ಕ ಕಾಲದಲ್ಲಿ ಗೊತ್ತುಮಾಡಿದ್ದಾರೆ. ಅದರ ಪ್ರಕಾರ ಅವರು ಯಾರು ಯಾರು ಕಾಲಿಫೈಡ್ ಆಗಿರುವವರು ಈ ಹುದ್ದೆಗಳಿಗೆ ಅರ್ಜಿ ಹಾಕಿಕೊಂಡಿರುತ್ತಾರೋ ಅವರನ್ನು ಸೆಲೆಕ್ಷನ್ ಕಮಿಟಿ ಪರಿಶೀಲನೆ ಮಾಡುತ್ತದೆ ಸೆಲೆಕ್ಷನ್ ಕಮಿಟಿಯಲ್ಲಿ ಡೀನ್, ಚೇರಮನ್, ಹೊರಗಡೆಯಿಂದ ಒಬ್ಬರು ಉಪಾಧ್ಯಾಯರು ಮತ್ತು ಇಲ್ಲಿನ ಒಬ್ಬ ಅಧ್ಯಾಪಕರು ಇರುತ್ತಾರೆ. ಅವರು ಪ್ಯಾನಲ್ ಆಫ್ ನೇಮ್ಸ್ ಕಳುಹಿಸಿಕೊಡುತ್ತಾರೆ. ಅದು ಬೋರ್ಡ್ ಆಫ್ ರೀಜೆಂಟ್ಸ್‌ಗೆ ಹೋಗುತ್ತದೆ ಬೋರ್ಡ್ ಆಫ್ ರೀಜೆಂಟ್ಸ್ ಅವರು ಪ್ಯಾನಲ್ ಆಫ್ ನೇಮ್‌ಅನ್ನು ಆರ್ಡರ್ ಆಫ್ ಮೆರಿಟ್ ಮೇಲೆ ಕಳುಹಿಸಿಕೊಡುತ್ತಾರೆ. ಅದೇ ಪ್ರಕಾರ ನೇಮಕ ಮಾಡಬೇಕು ಎನ್ನುವ ನಿಯಮ ಇಲ್ಲ ಮೂರು ಜನರ ಪೈಕಿ ಯಾರನ್ನಾದರೂ ಒಬ್ಬರನ್ನು ಅಪಾಯಿಂಟ್ ಮಾಡಿಕೊಳ್ಳುವುದಕ್ಕೆ ಅವಕಾಶ ಇದೆ. ಕ್ವಾಲಿಫಿಕೇಷನ್ಸ್

ರಿಲಾಕ್ಸ್ ಮಾಡುವುದಕ್ಕೆ ಬೋರ್ಡ್ ಆಫ್ ರೀಜೆಂಟ್ಸ್‌ಗೆ ಶಾಸಕರು ಕೊಟ್ಟಂಥ ಅಧಿಕಾರದಲ್ಲಿ ಅವಕಾಶ ಇದೆ. ಅದರ ಪ್ರಕಾರ ಮಾಡಿದ್ದಾರೆ ಒಂದೊಂದು ಸಂದರ್ಭದಲ್ಲಿ ಮೊದಲನೆಯವರನ್ನು ತೆಗೆದುಕೊಳ್ಳದೆ ಎರಡನೆಯವರು ಅಥವಾ ಮೂರನೆಯವರನ್ನು ತೆಗೆದುಕೊಂಡಿರತಕ್ಕ ನಿದರ್ಶನಗಳು ಇವೆ.

ಶ್ರೀ ಜಿ. ರಾಮೇಗೌಡ :— ಎಕ್ಸರೇ ಬುಕ್‌ಲೀಟಿನಲ್ಲಿರುವ ಅಂಶಗಳನ್ನು ಪರಿಶೀಲನೆ ಮಾಡಿದರೆ ಈಗಿನ ವೈಸ್ ಚಾನ್ಸಲರ್ ಮೇಲೆ ಮಸಿ ಬಳೆದು, ಮುಂದೆ ವೈಸ್ ಚಾನ್ಸಲರ್ ಆಗಬೇಕೆಂಬ ದುರುದೇಶದಿಂದ ಪ್ರಚೋದನೆಯನ್ನು ಆರೋಪಣೆಯನ್ನು ಮಾಡುತ್ತಿರುವುದು ಗೊತ್ತಾಗುತ್ತದೆ ಅಲ್ಲವೇ ?

ಶ್ರೀ ಬಿ. ರಾಚಯ್ಯ :— ಅದು ಮಾನ್ಯಸದಸ್ಯರ ಅಭಿಪ್ರಾಯ ಇರಬಹುದು.

ಶ್ರೀ ಬಿ. ಎಂ. ಇದ್ದಿನಬ್ಬ :— ಈ ಯೂನಿವರ್ಸಿಟಿ ಬಗ್ಗೆ ಬರೆದ ಕಿರುಪೊತ್ತಿಗೆಯ ಸೂಕ್ಷ್ಮ ವಿವರ ತಿಳಿಸುತ್ತೀರಾ ?

ಶ್ರೀ ಬಿ. ರಾಚಯ್ಯ :— ಇದು ಉದ್ದವಾಗಿದೆ. ಆವರು ಕವಿಗಳು ಎಂದು ಕಾಣುತ್ತದೆ. ಎಕ್ಸರೇ ಎಂದು ಹೇಳಿ ದೊಡ್ಡದಾಗಿ ಬರೆದಿದ್ದಾರೆ.

ಶ್ರೀ ಸಿದ್ದಯ್ಯ ಕಾಶಿಮಠ ;— ವಿಶ್ವವಿದ್ಯಾನಿಲಯದಲ್ಲಿ ಅಸೋಸಿಯೇಟೆಡ್ ಪ್ರೊಫೆಸರ್‌ಗಳನ್ನು ನೇಮಕ ಮಾಡುವುದರಲ್ಲಿ ಅನ್ಯಾಯವಾಗಿದೆ ಎಂದು ರಾಜ್ಯದ ಮುಖ್ಯಮಂತ್ರಿಗಳಿಗೆ ದೂರು ಕೊಟ್ಟಿದ್ದು ನಿಜವೇ ಅಲ್ಲವೇ ? ದೂರುಗಳು ಏನಾದರೂ ಇದ್ದರ ಎನ್‌ಕ್ವೈರಿ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ :— ಕೆಲವು ದೂರುಗಳು ಬಂದಮೇಲೆ ನಮಗೆ ಅನ್ಯಾಯವಾಗಿದೆ ಎಂದು ಭಾವಿಸಿಕೊಂಡಿರತಕ್ಕವರು ಮೂರು ಜನ ಹೈಕೋರ್ಟಿಗೆ ಹೋಗಿದ್ದಾರೆ. ಪೋಸ್ಟ್ ಆಫ್ ಅಸೊಸಿಯೇಟೆಡ್ ಪ್ರೊಫೆಸರ್ ಫಾರ್ ಅಗ್ರಿಕಲ್‌ಚರ್ ಅಂಡ್ ಎಕನಾಮಿಕ್ಸ್, ಅವರ ರಿಟ್ ಅರ್ಜಿ ಹೈಕೋರ್ಟಿನಲ್ಲಿ ಪೆಂಡಿಂಗ್ ಇದೆ. ಪೋಸ್ಟ್ ಆಫ್ ಯಾರೋಸಿಸ್ಟ್ ಫಾರ್ ಮಿಲ್ಲೆಟ್ ಸ್ಕೀಂ ಸಂಬಂಧಿಸಿದ್ದು ಮತ್ತು ಇನ್ನೊಂದು ಪೋಸ್ಟ್ ಆಫ್ ಅಸೋಸಿಯೇಟೆಡ್ ಪ್ರೊಫೆಸರ ಆಫ್ ಪೆಥಾಲಜಿ ಪೋಸ್ಟುಗಳ ಈ ಮೂರು ಬಗ್ಗೆ ಹೈಕೋರ್ಟಿನಲ್ಲಿ ಅರ್ಜಿಗಳು ಇರುವುದರಿಂದ ನ್ಯಾಯ ಅನ್ಯಾಯ ವಿಮರ್ಶೆಗಳನ್ನು ಹೈಕೋರ್ಟ್ ತೀರ್ಪಾನ ಮಾಡಿದ ಮೇಲೆ ಸರಕಾರ ಅವರ ಒಂದು ಆದೇಶ ಏನಿದೆ ಅದನ್ನು ಜಾರಿಗೆ ಕೊಡೋಣ ಎಂದು ಇವೆ.

ಶ್ರೀ ಎಸ್. ಎಚ್. ಪುಟ್ಟ ರಂಗನಾಥ ;— ಅಡ್‌ಪರ್‌ಟೈಸ್‌ಮೆಂಟ್ ಇಲ್ಲದ ವೈಸ್‌ಚಾನ್ಸಲರ್ ಒಂದು ರಿಸ್ಕ್ ಮೇಲೆ ಹುದ್ದೆಗಳಿಗೆ ಆಪಾಯಿಂಟ್ ಮಾಡಿಸುವುದನ್ನು ರದ್ದು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ ;— ಅಡವರಟೈಸ್‌ಮೆಂಟ್ ಮೂಡಿ ತೆಗೆದುಕೊಳ್ಳಬೇಕಾಗಿದೆ ತಾವು ಹೇಳಿದ್ದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಆರ್. ಹುಣಿಸ್ವಾಮಿ ;— ಎಕ್ಸ ರೇ ಬುಕ್‌ಲೆಟಿನಲ್ಲಿ ಕೆಲವು ಕಡೆ ಕೊಟ್ಟಿರತಕ್ಕ ಅಭಿಪ್ರಾಯಗಳಿಗೂ ಅನಂತರ ಕೊಟ್ಟಿರತಕ್ಕ ಅಭಿಪ್ರಾಯಗಳಿಗೂ ಒಂದಕ್ಕೊಂದಕ್ಕೆ ವಿರುದ್ಧವಾಗಿ ಕಾಣಿಸುತ್ತಾ ಇದೆ. ಇದನ್ನು ಬಣಕಾರರು ಓದಿ ಸರಿಪಡಿಸಿಕೊಳ್ಳಬಲ್ಲರೆ ?

ಅಧ್ಯಕ್ಷರು ;— ಅದು ಬಣಕಾರರಿಗೆ ಸಂಬಂಧಿಸಿದ ಪ್ರಶ್ನೆ.

1-30 P.M.

Sri AZEEZ SAIT:—Sir, the problem before us is 'X Ray on theAgricultural University'. We have no report of the Agricultural Uni-

(SRI AZEEZ SAIT)

versity before us. However, the irregularities and injustices done to the minority communities have been pointed out in the 'X Ray on the Agricultural University'. Sriyuths Venkateshaiah, Chikka Venkateshaiah, Chikka Muniyappa, Mulla, Gaviyappa and Dr. Mohiuddin, possessing PHD., and B.Sc., qualifications and who are qualified as per the exact requirement of the University have been overlooked for promotion and have been harrassed at the hands of the Vice-Chancellor. Will the Government consider the appointment of a Committee to go into the details so that an impartial view is taken and justice is done to these people as the matter is raised not only in this House but also outside?

Sri B. RACHAIAH:—In the first place I do not agree that the Vice-Chancellor is the sole authority in appointing the professors or personnel of the University It is the Regeants of the Agricultural University who are the ultimate authority to approve of the panel of names suggested by the Selection Committee. Therefore he is a figure Head; he takes the opinion of the Regeants and carries out their decision. Secondly, there have been certain representations made to the Government that certain minorities are not protected including the scheduled castes and scheduled tribes. When I looked into the figures, there has been some injustice done, because no reservation is made to the backward communities and they had to take their chance on merit. Government is thinking of providing for reservation in these autonomous bodies also.

ಶ್ರೀ ಹೆಚ್.ಬಿ. ಜ್ವಾಲನಯ್ಯ:—ತಮ್ಮ ಹೇಳಿಕೆ ಪ್ರಕಾರ ಅನೇಕ ಮೈನಾರಿಟಿ ಕಮ್ಯೂನಿಟಿಗಳಿಗೆ ಅನ್ಯಾಯವಾಗಿದೆ ಎಂದು ಒಪ್ಪಿಕೊಂಡಿದ್ದೀರಿ. ಇದನ್ನೆಲ್ಲಾ ಪುನಃ ಪರಿಶೀಲನೆ ಮಾಡುವುದಕ್ಕೆ ಸರ್ಕಾರ ವಿಶ್ವವಿದ್ಯಾನಿಲಯಕ್ಕೆ ಆದೇಶ ನೀಡುತ್ತದೆಯೇ? ಮತ್ತು ಈ ಎಕ್ಸ್‌ರೇ ಬಗ್ಗೆ ಅಗ್ರಿಕಲ್ಚರಲ್ ಯೂನಿವರ್ಸಿಟಿ ಅಧಿಕಾರಿವರ್ಗದಿಂದ ಸಮಜಾಯಿಷಿ ತೆಗೆದುಕೊಂಡು ಪರಿಶೀಲನೆ ಮಾಡುತ್ತೇನೆ ಎಂದು ಉತ್ತರ ಕೊಟ್ಟಿದ್ದೀರಿ. ಆ ಪೂರ್ತಿ ರಿಪೋರ್ಟನ್ನು ಈ ಸಭೆಯ ಮುಂದೆ ಇಡುತ್ತೀರಾ?

ಶ್ರೀ ಬಿ. ರಾಚಯ್ಯ:—ಇದನ್ನೆಲ್ಲಾ ಪುನರ್‌ಪರಿಶೀಲನೆ ಮಾಡುವ ಕಾಲ ಮುಗಿದಿದೆ. ರಿಪೋರ್ಟನ್ನು ಟೇಬಲ್ ಮುಂದೆ ಇಡುವುದಕ್ಕೆ ನನ್ನ ಅಭ್ಯಂತರವಿಲ್ಲ. ಬೋರ್ಡ್ ಆಫ್ ರೀಜಂಟ್ಸ್ ಅಪಾಯಿಂಟ್ ಮಾಡತಕ್ಕ ಕಾಲದಲ್ಲಿ ಎಲ್ಲಾ ಭಾಗಕ್ಕೂ ಕೂಡ ಸಾಕಾದಷ್ಟು ಪ್ರಾತಿನಿಧ್ಯ ಇಲ್ಲ ಎಂಬುದನ್ನು ಸರ್ಕಾರ ಗಮನಿಸಿದೆ. ಸದ್ಯದಲ್ಲೇ ರೀಕಾನ್‌ಸ್ಟಿಟ್ಯೂಟ್ ಮಾಡತಕ್ಕ ಕಾಲದಲ್ಲಿ ಎಲ್ಲಾ ಭಾಗಕ್ಕೂ ಕೂಡ ಏನು ಪ್ರಾತಿನಿಧ್ಯ ಕೊಡಬೇಕೋ ಅದನ್ನು ಕೊಟ್ಟು ರೀಕಾನ್‌ಸ್ಟಿಟ್ಯೂಟ್ ಮಾಡುವುದರಿಂದ ಮುಂದೆ ಅದು ಸರಿಯಾಗಿ ನಡೆಯುವುದಕ್ಕೆ ಅವಕಾಶವಾಗುತ್ತದೆ ಎಂದು ಹೇಳುತ್ತೇನೆ.

ಶ್ರೀ ಪಿ. ವೆಂಕಟಗಿರಿಯಪ್ಪ:—ಉನ್ನತ ಹುದ್ದೆಗಳಿಗೆ ನೇಮಕ ಮಾಡುವಾಗ ಹೆಚ್ಚು ವಿದ್ಯಾರ್ಹತೆ ಇರುವವರನ್ನು ಬಿಟ್ಟು ಇತರರನ್ನು ನೇಮಕ ಮಾಡಿದ ರೆ ಪ್ರೋ ಚಾನ್ಸ್‌ಲರ್‌ರವರು ಇಂಟರಫಿಯರ್ ಮಾಡುವುದಕ್ಕೆ ಅಧಿಕಾರವಿದೆಯೇ ಎಂದು ಕೇಳುತ್ತೇನೆ.

ಶ್ರೀ ಬಿ ರಾಚಯ್ಯ:—ರೂಲ್ ೮ ರ ಪ್ರಕಾರ ಅಧಿಕಾರ ಇದೆ, ಅದರ ಪ್ರಕಾರ ಏನು ಅನ್ಯಾಯ ಆಗಿದೆ ಅಂತ ಹೇಳುತ್ತಾರೆ ಅದು ಸರ್ಕಾರದ ಗಮನಕ್ಕೆ ಬಂದಾಗ ಎಕ್ಸ್‌ಪ್ಲೆನೇಷ್ ಕಾಲ್‌ಫಾರ್ ಮಾಡುವುದಕ್ಕೆ ಅವಕಾಶ ಇದೆ.

ಶ್ರೀಮತಿ ಲೀಲಾವತಿ ರೈ:—ಸೌತ್ ಕೆನರಾಕ್ಕೆ ಒಂದು ರೆಪ್ರಸೆಂಟೇಷ್ ಕೊಡುವ ಅಭಿಪ್ರಾಯ ಸರ್ಕಾರಕ್ಕೆ ಇದೆಯೇ?

ಶ್ರೀ ಬಿ. ರಾಚಯ್ಯ:—ವೈಸ್ ಚಾನ್ಸ್‌ಲರ್‌ರವರು ಸೌತ್ ಕೆನರಾದಿಂದ ಬಂದಿರುವವರೇ.

ಶ್ರೀ ಕೆ.ಹೆಚ್. ರಂಗನಾಥ:—ವಿದ್ಯಾರ್ಹತೆ ಏನು ನಿಗದಿ ಮಾಡಿರುತ್ತಾರೆ ಅದನ್ನು ಗಮನಕ್ಕೆ ತೆಗೆದು ಕೊಂಡು ನೇಮಕ ಮಾಡುತ್ತೀರಾ ಅಥವಾ ಅದನ್ನು ಬಿಟ್ಟು ರೀಜ್ ಅಥವಾ ಜಾತಿಯ ಆಧಾರವನ್ನು ಇಟ್ಟುಕೊಂಡು ಮಾಡುತ್ತೀರಾ?

ಶ್ರೀ ಬಿ. ರಾಚಯ್ಯ:— ಮಿನಿಮಂ ಕ್ವಾಲಿಫಿಕೇಷ್ ವೇಲೆ ಎಷ್ಟಿದ್ದರೂ ಕೂಡ ಅಂಥವರು ಪ್ಯಾನಲ್ ನಲ್ಲಿ ಬರುತ್ತಾರೆ. ಮಿನಿಮಂ ಕ್ವಾಲಿಫಿಕೇಷ್ ಇಲ್ಲದೇ ಇದ್ದವರನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಮೆರಿಟ್ ಪ್ರಕಾರ ನೇಮಕ ಮಾಡುತ್ತಾರೆ.

ಶ್ರೀ ಕೆ.ಹೆಚ್. ರಂಗನಾಥ:—ಜಾತಿ ಮತ್ತು ರೀಜ್ ಆಧಾರವಾಗಿಟ್ಟುಕೊಂಡು ಮಾಡುತ್ತೀರಾ? ಅರ್ಹತೆಯೇ ಮುಖ್ಯವೇ ಅಥವಾ ಎಲ್ಲಾ ಡಿಪ್ರಿವ್ಡ್, ಎಲ್ಲಾ ತಾಲ್ಲೂಕು, ಎಲ್ಲಾ ಜಾತಿಯವರನ್ನು ಅಪಾಯಿಂಟ್ ಮಾಡಬೇಕೆಂಬ ನೀತಿ ಇದೆಯೇ?

ಶ್ರೀ ಬಿ. ರಾಚಯ್ಯ:—ಆ ರೀತಿ ನಿಯಮಾವಳಿಯಲ್ಲಿ ಇಲ್ಲ.

ಶ್ರೀ ಎ. ಎ. ಚನ್ನೇಗೌಡ:—ಸೆಲೆಕ್ಟ್ ಕಮಿಟಿಯವರು ಮಾಡಿದ್ದನ್ನು ಬೋರ್ಡ್ ಆಫ್ ರೀಜೆಂಟ್ ರವರು ಉಲ್ಲಂಘಿಸುವುದಕ್ಕೆ ಅವಕಾಶವಿದೆಯೆ? ಸೆಲೆಕ್ಟ್ ಕಮಿಟಿಯವರು ಮಾಡಿದಂತಹ ತೀರ್ಮಾನ ಮೆರಿಟ್ ಮೇಲೆ ಮಾಡಿರುವುದು ಅಲ್ಲವೇ?

ಶ್ರೀ ಬಿ. ರಾಚಯ್ಯ:—ಮಾನ್ಯ ಸದಸ್ಯರು ಬೋರ್ಡ್ ಆಫ್ ರೀಜರಟ್‌ನ ಒಬ್ಬ ಸದಸ್ಯರಾಗಿದ್ದಾರೆ. ಆದರೂ ಕೂಡ ಮಾನ್ಯ ಸಭೆಯ ಗಮನಕ್ಕೆ ತರುತ್ತೇನೆ, ಪ್ಯಾನಲ್‌ನಲ್ಲಿ ಯಾವ ಹೆಸರು ಕಳುಹಿಸುತ್ತಾರೋ ಆ ಹೆಸರನ್ನು ಮಾತ್ರ ಸೆಲೆಕ್ಟ್ ಮಾಡಬೇಕು, ಅದನ್ನು ಬಿಟ್ಟು ಔಟ್‌ಸೈಡ್ ದಿ ಪ್ಯಾನಲ್ ಸೆಲೆಕ್ಟ್ ಮಾಡುವುದಕ್ಕೆ ಅಧಿಕಾರ ಇಲ್ಲ. ಮಂತ್ರು ಪ್ಯಾನಲ್ ಕಳುಹಿಸಿರುವ ಪ್ರಕಾರ ಆರ್ಡರ್ ಆಫ್ ಮೆರಿಟ್ ಬದಲಾವಣೆ ಮಾಡುವುದಕ್ಕೆ ರೀಜಂಟ್‌ಗೆ ಅವಕಾಶ ಇದೆ.ಮೆರಿಟ್ ಪ್ರಕಾರ ೧–೨–೩ ಅಂತ ಮಾಡಿರುತ್ತಾರೆ, ಅದರ ಪೈಕಿ ೧ನೇ ನಂಬರಿನವರನ್ನೇ ತೆಗೆದುಕೊಳ್ಳಬೇಕೆಂದು ನಿಯಮ ಇದ್ದಿದ್ದರೆ ಬೋರ್ಡ್ ಆಫ್ ರೀಜಂಟ್ ಇರಬೇಕಾಗಿರಲಿಲ್ಲ. ಸೆಲೆಕ್ಟ್ ಕಮಿಟಿಯವರೇ ಮಾಡಬಹುದಾಗಿತ್ತು.

ಶ್ರೀ ಎಂ. ನಾಗಪ್ಪ:—ಈ ಬಗ್ಗೆ ಒಂದು ಹೈಲೆವಲ್ ಕಮಿಟಿ ಮಾಡಿ ಅವರಿಗೆ ಇದನ್ನು ಪುನರ್ ಪರಿಶೀಲನೆ ಮಾಡುವುದಕ್ಕೆ ಕಳುಹಿಸಲು ಯೋಚನೆ ಮಾಡುತ್ತೀರಾ?

ಶ್ರೀ ಬಿ. ರಾಚಯ್ಯ:—ನಾನು ಈ ಬಗ್ಗೆ ಹೀಟೇಲ್ಸ್ ಕೇಳಿದ್ದೆ. ಜಾತಿವಾರು ಅಂಕ ಅಂಶಗಳನ್ನು ಕೊಟ್ಟುಬಿಡಿ ಅಂತ ಹೇಳಿದರೆ ಅದನ್ನು ಓದುತ್ತೇನೆ. ಅದರ ಮೇಲೆ ಯಾವ ಯಾವ ಭಾಗಕ್ಕೆ ಎಷ್ಟೆಷ್ಟು ಆಗಿದೆ ಅಂತ ಅನ್ನುವುದನ್ನು ತಾವೇ ತಿಳಿದುಕೊಳ್ಳಬಹುದು.

(ಶ್ರೀ ಬಿ. ರಾಚಯ್ಯ)

೨೦೦ ರಿಂದ ೫೦೦ರವರೆಗೆ ಇರುವವರು:—ಒಕ್ಕಲಿಗರು ೩೭, ಲಿಂಗಾಯಿತರು ೬೯, ಬ್ರಾಹ್ಮಣರು ೬೮, ಮುಸ್ಲಿಮರು ೨೩, ಷೆಡ್ಯೂಲ್ಡ್ ಕ್ಯಾಸ್ಟ್ಸ್ ಅಂಡ್ ಟ್ರೈಬ್ಸ್ ಒಬ್ಬರು, ಅದರ ಕಮ್ಯೂನಿಟೀಸ್ ೭೬, ಹಳೇ ಮೈಸೂರಿನವರು ೧೭೬, ಇಂಟಿಗ್ರೇಟೆಡ್ ಪಾರ್ಟುಗಳವರು ೭೬. ೫೦೦ ರಿಂದ ೪೦೦ ರವರೆಗೆ ಇರುವವರು: ೧೬ ಒಕ್ಕಲಿಗರು, ೩ ಲಿಂಗಾಯಿತರು, ೨೫ ಬ್ರಾಹ್ಮಣರು, ಮುಸ್ಲಿಮರು ೬. ಅದರ ಕಮ್ಯೂನಿಟಿಗಳವರು ೨೬, ಹಳೇ ಮೈಸೂರಿನವರು ೬೨. ಇಂಟಿಗ್ರೇಟೆಡ್ ಪಾರ್ಟಿನವರು ೧೦ ಜನ ಇದ್ದಾರೆ, ಔಟ್‌ಸೈಡ್ ಮೈಸೂರು ಬಂದಿರುವವರು ೫೦ ಮಂದಿ ಇದ್ದಾರೆ.

ಶ್ರೀ ಪಿ. ವೆಂಕಟಗಿರಿಯಪ್ಪ:— ಈ ರೀತಿ ಮಾನ್ಯ ಮಂತ್ರಿಗಳು ಜಾತಿವಾರು ವಿವರ ಕೊಡುವುದು ಸರಿಯಲ್ಲ.

Mr. SPEAKER:—I agree with the sentiments expressed by Hon. Member Sri Venkatagiriyappa, that matters of communal nature should not figure on the floor of this House. The Hon. Minister read out the information at the request of Hon. Members. The Hon. member Sri P. Venkatagiriyappa should have taken objection immediately.

Sri H. SIDDAVEERAPPA:—Sir, just now the Hon Minister read out the names of various communities. In 1961 census there is no provisiou for enumeration of population according to communities. I would like to know, how the Hon. Minister managed to get this information and whether it is right on the part of the Hon. Minister to inject communal feelings on the floor of this Hose?

Sri B. RACHAIAH:—I repudiate the insinuation made by Hon. Member Sri Siddaveerappa. Since Hon. Member Sri Banakar has injected a communal issue in his book "H-Ray on Agricultural Universities" I had to get this information co lected. Hon. Member Sri Siddaveerappa is a lingayat or not is known to everybody. Similarly, in regard to persons working in a department, it is very easy to find out the communities to which they belong.

ಶ್ರೀ ಮಹದೇವ್.ಜಿ.ಬಣಕಾರ್:—ತಾವು ಕೊಟ್ಟರುವ ಅಪಾಯಿಂಟ್‌ಮೆಂಟುಗಳ ವಿಚಾರ ಹೇಳಿದಿರಿ. ನಾನೊಂದು ಕೊನೆಯ ಪ್ರಶ್ನೆ ಕೇಳಬೇಕಾಗಿದೆ. ಸೆಲೆಕ್ಷ್ಷ್ ಕಮಿಟಿ ಇದೆ, ಅದನ್ನು ರಚಿಸುವವರು ವೈಸ್ ಛಾನ್ಸಲರ್. ಆದುದರಿಂದ ಪ್ಯಾನಲ್ ಆಫ್ ನೇಮ್ಸ್ ವೈಸ್ ಛಾನ್ಸಲರು ಗೊತ್ತುಮಾಡಿರುವುದರಿಂದ ಆ ಚಾಕಟ್ಟಿನಲ್ಲೆ ಸೆಲೆಕ್ಟ್ ಮಾಡಬೇಕು. ಎಲ್ಲ ಹೆಸರುಗಳನ್ನೂ ಸ್ಕ್ರಾನ್ಸರ್ ಮಾಡುವವರು ವೈಸ್ ಛಾನ್ಸಲರಾಗಿರುವುದರಿಂದ ಮಾಡಿರುವುದು ಸರಿಯಲ್ಲ ಇದರ ವಿಚಾರದಲ್ಲಿ ಪ್ರತ್ಯೇಕ ಜುಡಿಷಿಯಲ್ ಎನ್‌ಕ್ವೈರಿ ಆಗಬೇಕು, ನಾನು ಹೇಳಿರುವುದು ರುಜುವಾತು ಮಾಡದಿದ್ದರೆ ರಾಜೀನಾಮೆ ಕೊಡುತ್ತೇನೆ. ಇಲ್ಲದಿದ್ದರೆ ತಾವು ಕೊಡಬೇಕು. ನಾನೇನು ತಮಾಷೆಗೆ ಪ್ರಶ್ನೆ ಹಾಕಿದ್ದೇನೆಯೇ? ಜುಡಿಷಿಯಲ್ ಎನ್‌ಕ್ವೈರಿ ಮಾಡಿ ಸಭೆ ಮುಂದೆ ಇಡಬೇಕು.

ಶ್ರೀ ಬಿ. ರಾಚಯ್ಯ:—ಒಂದೆರಡು ಸಂದರ್ಭಗಳಲ್ಲಿ ಪ್ರೊಛಾನ್ಸಲರು ತಮಗಿರುವ ಅಧಿಕಾರ ಚಲಾಯಿಸಿದ್ದಾರೆ. ಇದೇ ವಿಷಯದಲ್ಲಿ ಹೈಕೋರ್ಟಿಗೆ ಕೇಸು ಹೋಗಿರುವುದರಿಂದ ಹೆಚ್ಚಿಗೆ ವಿಚಾರಮಾಡಲು ಅವಕಾಶವಿಲ್ಲ. ಮಾನ್ಯ ಸದಸ್ಯರೇಕರೇನು ಟೀಕೆ ಮಾಡಿದ್ದಾರೆ ಅದನ್ನು ಮುಂದೆ ಕಾನ್‌ಸ್ಟಿಟ್ಯೂಟ್ ಮಾಡುವಾಗ ಗಮನಿಸಲಾಗುವುದು.

ಶ್ರೀ ಮಹದೇವ್. ಜಿ. ಬಣಕಾರ್:—ಬೋರ್ಡ್ ಆಫ್ ರೀಜೆಂಟ್ಸ್‌ದು ತಪ್ಪಿಲ್ಲ. ಸೆಲೆಕ್ಷ್ ಕಮಿಟಿ ಅಪಾಯಿಂಟ್ ಮಾಡುವ ಅಧಿಕಾರ ವೈಸ್ ಛಾನ್ಸಲರಿಗಿರುವುದು, ಇಲ್ಲೇ ತಪ್ಪಾಗಿರುವುದು.

Sri B. RACHAIAH:—I am not shielding anybody here. I agree that the appointing authority for the Selection Committee is the Vice-Chancellor. But the Dean will invariably be the Chairman and another counter-part from outside the State will be appointed along with three officers including the Dean. While constituting the Selection Committee they take into consideration the qualification, merit etc. I cannot interfere with the day-to-day administration of the Agricultural University as it has been declared as an autonomous body. But in certain extraordinary circumstances, the Government has power under Section 8 (2) of the statute.

ಶ್ರೀ ಮಹದೇವ್.ಜಿ. ಬಣಕಾರ್:—ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡಬೇಕು.

ಅಧ್ಯಕ್ಷರು:—ಅದಕ್ಕೆ ನೋಟೀಸು ಕೊಡಿ, ಎಗ್ಜಾಮಿನ್ ಮಾಡುತ್ತೇನೆ. ಈಗ ಪ್ರಶ್ನೆ ನಂ. ೪೧೦, ಶ್ರೀ ತಮ್ಮಯ್ಯನವರು ಕೇಳಬಹುದು.

INDUSTRIES IN BANGALORE CITY

SRI K. M. THAMMIAH (Kadur) on behalf of 410. SRI L. SRIKANTAIAH (Nanjangud):—

Will the Minister for Industries, Information and publicity be pleased to state:—

(*a*) the number of Industries that are located in the City of Bangalore, (the list of industries of State and Central Governments with the year of their establishment may be furnished);

(*b*) the number of non-Government Industries in the State;

(*c*) the steps the Government has taken towards the dispersal of Industries in the State?

SRI M. RAJASEKARA MURTHY (Minister for Industries Information, and Publicity):—

(*a*) the following are the State and Central Government Industries located in Bangalore City:—

I Government Industrial Undertakings: Name of the Industrial Unit	*Years of establishment*
I. State Government Industrial Undertakings:	
1. Central Industrial Workshop	1897
2. Government Soap Factory	191 ›